**ದಿಃ 30.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ಜೆ ವಕೀಲರಿಂದಃ

ನಾನು ಈಗ ಚಿನ್ನದ ವ್ಯಾಪಾರ ಮಾಡುತ್ತಿದ್ದೇನೆ. 1996ರಲ್ಲಿ ನಾನು ಅಣ್ಣ ನಾಗೇಂದ್ರ ಬಾಳಿಗರವರಿಗೆ ಸಹಾಯ ಮಾಡುತ್ತಿದ್ದೆ. ಅಣ್ಣ ನಾಗೇಂದ್ರ ಬಾಳಿಗರವರು ಚಿನ್ನದ ವ್ಯಾಪಾರ ಮಾಡುತ್ತಿದ್ದರು. 1996ನೇ ಸಾಲಿನಲ್ಲಿ ನಾನು 1ನೇ ಪ್ರತಿವಾದಿ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟ್ನರ್ ಆಗಿದ್ದೆ. 1996ರಲ್ಲಿ ನನ್ನ ಆದಾಯದ ಮೂಲ ಅಣ್ಣ ಚಿನ್ನದ ಅಂಗಡಿಯ ವ್ಯವಹಾರದಲ್ಲಿ ನೀಡುತ್ತಿದ್ದರು ಮತ್ತು 1ನೇ ಪ್ರತಿವಾದಿ ಸಂಸ್ಥೆಯ ಲಾಭಾಂಶದಲ್ಲಿ ಆದಾಯ ಬರುತ್ತಿತ್ತು. ಮೊದಲು ಅಣ್ಣನವರು ತಾವು ಮಾಡುತ್ತಿದ್ದ ಪಾನ್ ಬ್ರೋಕರ್ ವ್ಯವಹಾರದಿಂದ ನೀಡುತ್ತಿದ್ದ ಆದಾಯವಿದ್ದು, ನಂತರ ಫೈನಾನ್ಸಿನಿಂದ ನನಗೆ ಆದಾಯ ಇತ್ತು.

2. ನನ್ನ ತಂದೆ ಬೆಳ್ಳಿಯ ವ್ಯಾಪಾರ ಮಾಡುತ್ತಿದ್ದರು. ನನಗಾಗಲೀ ನನ್ನ ತಂದೆಗಾಗಲೀ ಕೃಷಿ ಭೂಮಿ ಇರಲಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಅದು ಅಮಲ್ಜಾರಿ ದಾವೆ ಸಂಖ್ಯೆಃ 50/2017 ಪಿಟಿಶನ್ ಮತ್ತು ಅಫಿದಾವಿತ್ ಇದ್ದು ಅದನ್ನು ತಾನೇ ಹಾಕಿದ ಬಗ್ಗೆ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-**77** ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಈಗ ತೋರಿಸಿದಂತೆ ಮಧ್ಯಂತರ ಅರ್ಜಿ 1 ಸಲ್ಲಿಸಿದ್ದೆ ಎಂದರೆ ಸಾಕ್ಷಿ ಸದರಿ ದಾಖಲೆ ನೋಡಿ ಈಗ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ಸ್ವಾಧೀನಕ್ಕೆ ಕೊಡುವಂತೆ ಕೇಳಿದ್ದೇನೆ. ಸದರಿ ಪ್ರಕರಣದಲ್ಲಿ ನಾನು ಪೊಲೀಸ್ ಪ್ರೊಟೆಕ್ಷನ್ ಗೆ ಅರ್ಜಿ ಹಾಕಿದ್ದೇನೋ ಇಲ್ಲವೋ ಈಗ ನೆನಪಿಲ್ಲ.

3. ಸದರಿ ಪ್ರಕರಣದಲ್ಲಿ ಜಮೀನನ್ನು ಸ್ವಾಧೀನಕೊಡಿಸಲು ಕೋರ್ಟ್ ಅಮೀನರ ಜೊತೆಗೆ ಪೊಲೀಸರು ಸ್ಥಳಕ್ಕೆ ಬಂದದ್ದುಂಟು. ಪೊಲೀಸರು ಯಾರು ಬಂದಿದ್ದರು ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಈ ಕೇಸಿನ ವಾದಿಯವರು ಸದರಿ ಜಮೀನಿನಲ್ಲಿರುವ ಒಂದು ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಮನೆಯ ಡೋರ್ ನಂಬರ್ ನನಗೆ ಹೇಳಲು ಆಗುವುದಿಲ್ಲ. ಸದರಿ ಮನೆಯ ಡೋರ್ ನಂ.10-153 ಎಂದರೆ ನನಗೆ ನೆನಪಿಲ್ಲ. ಸದರಿ ದಿನ ನಾನು ಕೋರ್ಟ್ ಅಮೀನರಿಗೆ ಡೆಲಿವರಿ ರಸೀದಿಯನ್ನು ಬರೆದುಕೊಟ್ಟದ್ದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**78** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ವಾದಿಯವರು ಸದ್ರಿ ಮನೆ ಬಿ ಶೆಡ್ಯೂಲ್ ಭೂಮಿಯಲ್ಲಿ ಬರುವುದಿಲ್ಲ ಮತ್ತು ಎ ಶೆಡ್ಯೂಲ್ ಭೂಮಿಯಲ್ಲಿ ಬರುತ್ತದೆ ಎಂದು ಮನೆಯಿಂದ ಹೊರಗೆ ಬರಲು ನಿರಾಕರಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪೊಲೀಸರನ್ನು ಕರೆದುಕೊಂಡು ಹೋಗಿ ವಾದಿಯವರನ್ನು ಮನೆಯಿಂದ ಎಬ್ಬಿಸಿದ್ದೆನು ಎಂದರೆ ಸರಿಯಲ್ಲ.

4. ಅಮಲ್ಜಾರಿ ಅರ್ಜಿ ಸಂಖ್ಯೆ: 50/2017ನ್ನು ನಾನು ಸ್ವಂತ ಹೆಸರಿನಲ್ಲಿ ಸಲ್ಲಿಸಿದ್ದು ಎಂದರೆ ಸರಿ. ಅಮಲ್ಜಾರಿ ಕೇಸಿನಲ್ಲಿ ಮಿಸ್ ಕೇಸ್ ಸಂಖ್ಯೆ: 5/2007ರಲ್ಲಿ ಆದ ಆದೇಶವನ್ನು ಜಾರಿಗೊಳಿಸುವಂತೆ ಕೇಳುವ ಹಾಗೆ ಕಾಣುತ್ತದೆ ಎಂದರೆ ಸರಿಯಲ್ಲ. ಯಾವ ಆದೇಶದ ಅಮಲ್ಜಾರಿಗಾಗಿ ಸದರಿ ಕೇಸನ್ನು ಹಾಕಲಾಗಿತ್ತು ಎಂದು ನನಗೆ ಈಗ ನೆನಪಿಲ್ಲ. ಮಿಸ್ ಕೇಸ್ 5/2007 ಕೇಸನ್ನು ಯಾರು ಹಾಕಿದ್ದು ಎಂದು ನನಗೆ ನೆನಪಿಲ್ಲ. ಸದರಿ ಕೇಸನ್ನು ದೇವಪ್ಪ ಮೂಲ್ಯರವರ ವಿರುದ್ಧ ಹಾಕಲಾಗಿರಬಹುದು. ಮಿಸ್ ಕೇಸ್ ಸಂಖ್ಯೆ: 5/2007ರಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ಅದು ಯಾರ ಪರವಾಗಿ ಆಗಿತ್ತು ಎಂದರೆ ನಮ್ಮ ಪರವಾಗಿ ಆಗಿತ್ತು ಎನ್ನುತ್ತಾರೆ. ನಮ್ಮ ಪರವಾಗಿ ಅಂದರೆ 1ನೇ ಪ್ರತಿವಾದಿ ಫೈನಾನ್ಸ್ ಸಂಸ್ಥೆಯ ಪರವಾಗಿ ಆದೇಶ ಆಗಿತ್ತು. ಸದರಿ ಮಿಸ್ ಕೇಸ್ ಸಂಖ್ಯೆ: 5/2007 ರಲ್ಲಿ ಈ ಕೇಸಿನ 1ನೇ ಪ್ರತಿವಾದಿ ಫೈನಾನ್ಸ್ ಸಂಸ್ಥೆ ಪಾರ್ಟಿಯೇ ಅಲ್ಲ ಎಂದರೆ ಸರಿಯಲ್ಲ. ಸದರಿ ಮಿಸ್ ಕೇಸ್ ಸಂಖ್ಯೆ: 5/2007 ರಲ್ಲಿ ಆದ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ.

5. ಅಮಲ್ಜಾರಿ ಅರ್ಜಿ ಸಂಖ್ಯೆ: 50/2017ರಲ್ಲಿ ನಾನು ಪಬ್ಲಿಕ್ ಆಕ್ಷನ್ ನಲ್ಲಿ ಸೇಲ್ ಸರ್ಟಿಫಿಕೇಟ್ ಸಿಕ್ಕಿದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದು ಸದರಿ ಸೇಲ್ ಸರ್ಟಿಫಿಕೇಟ್ ಈಗ ನನ್ನ ಬಳಿ ಇಲ್ಲ, ಅದು ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ, ಅದನ್ನು ಯಾರಿಗಾದರೂ ಕೊಟ್ಟಿದ್ದುಂಟಾ ಎಂದರೆ ಯಾರು ಖರೀದಿ ಮಾಡಿದ್ದಾರೋ ಅವರಿಗೆ ಕೊಟ್ಟಿರಬಹುದು ಎನ್ನುತ್ತಾರೆ. ನಿಪಿ-77ರ ಅಫಿದಾವಿತ್ ನಲ್ಲಿ ಅಮಲ್ಜಾರಿ ಅರ್ಜಿ ಸಂಖ್ಯೆ: 91/2002 ಎಂದು ಹೇಳಿರುವ ಕೇಸನ್ನು ಯಾರು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

6. ಸದರಿ ನಿಪಿ-77ರ ಅಫಿದಾವಿತ್ ನಲ್ಲಿ ಹೇಳಿರುವ ವಿಚಾರಗಳು ಸರಿ ಇರುತ್ತವೆ. ನಿಪಿ-77ರ ಅಫಿದಾವಿತ್ ನಲ್ಲಿ ಹೇಳಿದಂತೆ ನಾನು ನನ್ನ ವೈಯಕ್ತಿಕ ನೆಲೆಯಲ್ಲಿ ಬಿಡ್ ಗಾಗಿ ಅರ್ಜಿ ಹಾಕಿರುವುದು ಎಂದು ಹೇಳಿರುವುದು ಸರಿ ಇರುತ್ತದೆ. ಆದುದರಿಂದ ಅಮಲ್ಜಾರಿ ಅರ್ಜಿ ಸಂಖ್ಯೆ: 91/2002 ರಲ್ಲಿ ನನ್ನ ವೈಯಕ್ತಿಕ ಹೆಸರಿನಲ್ಲಿ ಬಿಡ್ ಕರೆಯಲು ಕೋರ್ಟ್ ಅನುಮತಿ ಕೊಟ್ಟಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಅಮಲ್ಜಾರಿ ಅರ್ಜಿ ಸಂಖ್ಯೆ: 91/2002 ರಲ್ಲಿ ನಾನು ಈ ಕೇಸಿನ 1ನೇ ಪ್ರತಿವಾದಿ ಸಂಸ್ಥೆಯ ಹೆಸರಿನ ಪರವಾಗಿ ಬಿಡ್ ಅಂಡ್ ಮತ್ತು ಸೆಟ್ ಆಫ್ ಗೆ ಅರ್ಜಿ ಕೊಟ್ಟಿರಬಹುದು. 1ನೇ ಪ್ರತಿವಾದಿ ಸಂಸ್ಥೆಯ ಪರವಾಗಿ ಆಕ್ಷನ್ ಆಗಿತ್ತು. ನನ್ನ ವೈಯಕ್ತಿಕ ಹೆಸರಿನಲ್ಲಿ ಆಕ್ಷನ್ ಆಗಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ ಸಂಸ್ಥೆ ಆ ಸಮಯದಲ್ಲಿ ಆಕ್ಷನ್ ಕರೆಯುವಾಗ ಕಂದಾಯ ಇಲಾಖೆಯಿಂದ ಅನುಮತಿ ಪಡೆದುಕೊಂಡಿರಬಹುದು. ಸದರಿ ಅನುಮತಿ ಪತ್ರವನ್ನು 1ನೇ ಪ್ರತಿವಾದಿ ಸಂಸ್ಥೆ

ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ಸದರಿ ಆಕ್ಷನ್ ನಲ್ಲಿ 1ನೇ ಪ್ರತಿವಾದಿ ಸಂಸ್ಥೆ ಸಕ್ಷಸ್ ಫುಲ್ ಬಿಡ್ಡರ್ ಆಗಿತ್ತು. ಆಗ 1ನೇ ಪ್ರತಿವಾದಿ ಸಂಸ್ಥೆಯವರ ಹೆಸರಿಗೇ ನ್ಯಾಯಾಲಯವು ಸೇಲ್ ಸರ್ಟಿಫಿಕೇಟ್ ಕೊಟ್ಟಿತ್ತು ಈ ದಾವೆಯ ಬಿ ಶೆಡ್ಯೂಲ್ ಸ್ವತ್ತನ್ನು ವೈಯಕ್ತಿಕ ನೆಲೆಯಲ್ಲಿ ಪಡೆದದ್ದು ಇಲ್ಲ ಎಂದರೆ ಸರಿ. ಹಾಗಾಗಿ ವೈಯಕ್ತಿಕ ನೆಲೆಯಲ್ಲಿ ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ವೈಯಕ್ತಿಕ ಹಕ್ಕುದಾರರು ಆಗಿಲ್ಲ ಎಂದರೆ ಸರಿ.

**7.** ಹಾಗಾಗಿ ವೈಯಕ್ತಿಕ ಹೆಸರಿನಲ್ಲಿ ಬಿ ಶೆಡ್ಯೂಲ್ ಸ್ವತ್ತಿಗೆ ಆಕ್ಷನ್ ಆಗಿಲ್ಲ ಹಾಗಾಗಿ ನಾನು ಹಕ್ಕುದಾರನಲ್ಲ ಎಂದರೆ ಫೈನಾನ್ಸ್ ಹೆಸರಿನಲ್ಲಿ ಆಗಿತ್ತು ಎನ್ನುತ್ತಾರೆ. ಆ ಕಾರಣಕ್ಕಾಗಿ ಒಂದು ವೇಳೆ ಎಕ್ಸಿಕ್ಯೂಷನ್ ಸಂಖ್ಯೆ: 91/2002ರಲ್ಲಿ ನನ್ನ ವೈಯಕ್ತಿಕ ಹೆಸರಿನಲ್ಲಿ ಸೇಲ್ ಸರ್ಟಿಫಿಕೇಟ್ ಆಗಿದ್ದರೆ ಅದು ತಪ್ಪು ಎಂದರೆ ಸರಿಯಲ್ಲ. ಎಕ್ಸಿಕ್ಯೂಷನ್ ಸಂಖ್ಯೆ: 91/2002ರಲ್ಲಿ ಆದಂತಹ ಪ್ರಕ್ರಿಯೆಗಳೆಲ್ಲಾ ಕಾನೂನಿಗೆ ವ್ಯತಿರಿಕ್ತವಾದುದು ಎಂದರೆ ಸರಿಯಲ್ಲ. ಹಾಗಾಗಿ ಸದರಿ ಸೇಲ್ ಸರ್ಟಿಫಿಕೇಟ್ ಆಗಲೀ ಎಕ್ಸಿಕ್ಯೂಷನ್ ಸಂಖ್ಯೆ: 91/2002ರಲ್ಲಿ ಆದ ಆದೇಶವಾಗಲೀ ವಾದಿಗಾಗಲೀ ದಾವಾ ಬಿ ಶೆಡ್ಯೂಲ್ ಭೂಮಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

8. ನಾವು ಸಾಮಾನ್ಯವಾಗಿ 1ನೇ ಪ್ರತಿವಾದಿ ಸಂಸ್ಥೆಯ ಪರವಾಗಿ ವ್ಯವಹಾರ ಮಾಡುವಾಗ ಸೀಲ್ ಹಾಕಿ ಸಹಿ ಮಾಡಲಾಗುತ್ತದೆ ಎಂದರೆ ಸರಿ. ನಿಪಿ-77 ರಂತೆ ಅಮಲ್ಜಾರಿ ಕೇಸನ್ನು ಫೈನಾನ್ಸ್ ಪರವಾಗಿ ಹಾಕಿಲ್ಲ ವೈಯಕ್ತಿಕವಾಗಿ ಹಾಕಿದ್ದು ಎಂದರೆ ಸರಿಯಲ್ಲ. ಸದರಿ ನಿಪಿ-77 ಅಮಲ್ಜಾರಿ ಅರ್ಜಿಯಲ್ಲಿ ಫೈನಾನ್ಸ್ ಸೀಲ್ ಇಲ್ಲ ಎಂದರೆ ಸೀಲ್ ಹಾಕಲು ಮರೆತಿರಬಹುದು ಎನ್ನುತ್ತಾರೆ.

9. ನಿಪಿ-78 ಡೆಲಿವರಿ ರಸೀದಿ ಯಲ್ಲಿ ಕೂಡಾ ಫೈನಾನ್ಸ್ ಸೀಲ್ ಇಲ್ಲ ಎಂದರೆ ಸರಿ. ಅದೂ ಕೂಡಾ 1ನೇ ಪ್ರತಿವಾದಿ ಸಂಸ್ಥೆಯ ಪರವಾಗಿ ಬರೆದುಕೊಟ್ಟ ರಸೀದಿ ಅಲ್ಲ ಎಂದರೆ ಸರಿಯಲ್ಲ. ವಾದಿಯವರನ್ನು ದಾವಾ ಬಿ ಶೆಡ್ಯೂಲ್ ಸ್ವತ್ತಿನಿಂದಾಗಲೀ ಅದರ ಮನೆಯಿಂದಾಗಲೀ ಅವನ್ನು ಎಬ್ಬಿಸಲು ನನಗೆ ವೈಯಕ್ತಿಕವಾಗಿ ಯಾವುದೇ ಅಧಿಕಾರವಿರಲಿಲ್ಲ ಎಂದರೆ ಸರಿಯಲ. ಎಕ್ಸಿಕ್ಯೂಷನ್ 50/2017ರ ಪ್ರಕರಣದಲ್ಲಿ ನನಗೆ ಯಾವುದೇ ಅಧಿಕಾರವಿಲ್ಲದಿದ್ದರೂ ವಾದಿಯವರನ್ನು ದಾವಾ ಬಿ ಶೆಡ್ಯೂಲ್ ಸ್ವತ್ತಿನಿಂದ ಮತ್ತು ಅವರ ಮನೆಯಿಂದ ಕಾನೂನು ಬಾಹಿರವಾಗಿ ಪೋಲೀಸರ ಸಹಾಯದಿಂದ ವಾದಿಯನ್ನು ಎಬ್ಬಿಸಿದ್ದೇನೆ ಎಂದರೆ ಸರಿಯಲ್ಲ. ಆದುದರಿಂದ ಮನೆ ನಂಬರ್ 10-153 ಮತ್ತು ಬಿ ಶೆಡ್ಯೂಲ್ ಸ್ವತ್ತಿನಿಂದ ವಾದಿಯನ್ನು ಎಬ್ಬಿಸಿರುವ ಪ್ರಕ್ರಿಯೆ ಕಾನೂನು ಬಾಹಿರ ಎಂದರೆ ಸರಿಯಲ್ಲ. ಹಾಗಾಗಿ ಬಿ

ಶೆಡ್ಯೂಲ್ ಸ್ವತ್ತು ಮತ್ತು ಮನೆ ನಂಬರ್ 10-153ನ್ನು ವಾದಿ ಮರು ಸ್ವಾಧೀನ ಪಡೆಯಲು ಅರ್ಹರು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**